ಶ್ರೀ ಕೆ. ಹೆಚ್. ಪಾಟೀಲ್.—ಕಾಟನ್ ಡೆವಲಪ್‌ಮೆಂಟ್ ಸ್ಕೀಮ್ ಅನ್ನೇ ಅಬಾಲಿಷ್ ಮಾಡಿದ್ದಾರೆ. ತಲೆ ತಲಾಂತರದಿಂದ ಬಂದಂತಹ ಸ್ಕೀಮನ್ನೇ ಅಬಾಲಿಷ್ ಮಾಡಿದ್ದಾರೆ. ಆದು ಇಲ್ಲದಿದ್ದರೆ ಮುಂದಿನ ವರ್ಷ ಬೀಜಕ್ಕೆರೈತರಿಗೆ ಸಿಕ್ಕುವುದಿಲ್ಲ. ಎಲ್ಲಾ ಕಡೆ ಭಿಕ್ಷೆ ಬೇಡಿ ತರುತ್ತೀರಾ ? ಆದ್ದರಿಂದ ಕಾಟನ್ ಡೆವಲಪ್‌ಮೆಂಟ್ ಸ್ಕೀಮನ್ನು ಮುಂದುವರಿಸುವಂತಹ ಕೆಲಸವನ್ನ ಮಾಡ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸಾರ್.

ಶ್ರೀ ಆರ್. ಎನ್. ನಾಯಕ್.—ವಿಧಾನ ಸಭೆಯಲ್ಲಿ ಒತ್ತಾಯ ಮಾಡಿದರು ಎಂದೂ ಕೆಟ್ಟ ಬೀಜ ವನ್ನು ತಂದು ಕೊಟ್ಟು ಬಿಟ್ಟರಿ ? ಒಳ್ಳೆಯ ಬೀಜವನ್ನು ಸರಬರಾಜು ಮಾಡುವುದು ಬಹಳ ಮುಖ್ಯ ವಾದುದು. ಮೊನ್ನೆ ಕೂಡ ಬೇಗ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಕನಿಷ್ಟ ೧೦ ದಿವಸ ಗಳಿಗಿಂತ ಮೊದಲೇ ಬೀಜ ಸರಬರಾಜು ಆಗಬೇಕಾಗಿತ್ತು. ಆದು ಆಗಿಲ್ಲ. ಇವತ್ತೇ ನಿಮ್ಮ ಅಧಿಕಾರಿ ಗಳಿಗೆ ತಿಳಿಸಿ ಕೂಡಲೇ ಆ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶವನ್ನು ನೀಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತಂ.

ನಿಯಮ ೩೩ಳಿರ ಮೇರೆಗೆ

೪) ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೋದ್ಯಮಗಳಿಗೆ ಸರ್ಕಾರ ಪ್ರೋತ್ಸಾಹ ನೀಡಿ ವಿದ್ಯುತ್ ಸರಬರಾಜು ಮಾಡುವುದರ ಬಗ್ಗೆ.

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೋದ್ಯಮಿ ಗಳಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಆದರ ಬದಲು ''ವಿದ್ಯುತ್ ಕಡಿತ''ದ ಧೋರಣೆಯಿಂದಾಗಿ ಚಿಕ್ಕ ಕೈಗಾರಿಕೆಗಳ ಕತ್ತು ಹಿಸುಕುವ ಪರಿಸ್ಥಿತಿ ಬಂದಿದೆ. ಕೊಡಗು ಜಿಲ್ಲೆಯಲ್ಲಿ ಬೆಳಿಗ್ಗೆ ೮ ಗಂಟೆಯಿಂದ ಅಪರಾಹ್ನ ೪ ಗಂಟೆ ತನಕ ವಿದ್ಯುತ್ ಕಡಿತ. ರಾಜ್ಯದಲ್ಲಿ ಬೇರೆಲ್ಲೂ ಇಲ್ಲದ ನೀತಿ ಕೊಡಗಿನ ಹಳ್ಳಿಗಳಿಗೇಕೆ ? ಆದೂ ಸತತವಾಗಿ ೮ ಗಂಟೆ ಕಡಿತವೇಕೆ ? ಬೆಳಿಗ್ಗೆ ೪ ಗಂಟೆ, ಸಂಜೆ ೪ ಗಂಟೆ ಬೇರೆ ಬೇರೆ ಅವಧಿಯಲ್ಲಿ ಕಡಿತ ಮಾಡಿದರಾಗದೇ ? ರೈತರು, ಚಿಕ್ಕ ಉದ್ದಿಮೆದಾರರು ಎಲ್ಲರಿಗೂ ಈ ಸಂಕಟಕರವಾದ ನೀತಿ, ಕಂಟಕಪ್ರಾಯವಾಗಿದೆ. ಈ ಜಿಲ್ಲೆಯ ಜನ ಹಗಲು ಕೆಲಸವೇ ಮಾಡಬಾರದೆಂದು ಸರ್ಕಾರದ ಧೋರಣೆ ಇದೆಯೇ? ಆದೂ ಅಲ್ಲದೆ, ಗುಡ್ಡಗಾಡು ಪ್ರದೇಶವಾದ ಕೊಡಗಿನಲ್ಲಿ ಗುಡುಗು ಮಿಂಚು ಮಳೆ ಮರ ಬೀಳುವುದರಿಂದಾಗಿ ಒಮ್ಮೊಮ್ಮೆ ಎಷ್ಟೋ ಕಾಲ ವಿದ್ಯುತ್ ಕಡಿತವಾಗುತ್ತದೆ, ಈ ಪ್ರಕೃತಿಯ ಪ್ರಕೋಪದ ಜೊತೆಗೆ ಪ್ರಕೃತ ವಿದ್ಯುತ್ ಮಂಡಳಿಯ ಕಡಿತದ ಶಾಪವೂ ಸೇರಿ, ರೈತರು ಚಿಕ್ಕ ಉದ್ದಿಮೆದಾರರು ಶಾಪಕ್ಕೀಡಾದವರಂತಾಗಿದ್ದಾರೆ. ಈ ಪರಿತಾಪವನ್ನು ಪರಿಶೀಲಿಸಿ, ಕೊಡಗಿನ ಬರೀ 'ಪಾಪ'ದ ಜನರ ಮೇಲೆ ಅನುಕಂಪ ತೋರಿಸಿ, ಅನುಕೂಲಕರ ವ್ಯವಸ್ಥೆ ಮಾಡಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ೧೯೮೭–೮೮ನೇ ಸಾಲಿನಲ್ಲಿನ ಆನಿರ್ಬಂಧಿತ ಬೇಡಿಕೆ ೧೬,೯೮೦ ದಶಲಕ್ಷ ಯೂನಿಟ್‌ಗಳು. ಆದರೆ ಈ ಸಾಲಿನಲ್ಲಿ ಮುಂಗಾರು ಹೆಚ್ಚು ಕಡಿಮೆ ಪೂರ್ಣ ವಿಫಲವಾದ ಕಾರಣ ಆಂತರಿಕ ವಿದ್ಯುತ್ ಉತ್ಪಾದನೆಯಲ್ಲಿ ಗಮನಾರ್ಹ ಇಳಿಮುಖವಾಗಿ ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ದೊರೆತ ವಿದ್ಯುತ್ ೧೦,೬೪೩ ದಶಲಕ್ಷ ಯೂನಿಟ್‌ಗಳು. ಹೀಗಾಗಿ ಕೊರತೆ ೬,೨೫೭ ದಶಲಕ್ಷ ಯೂನಿಟ್‌ಗಳಾದವು. ಈ ಕೊರತೆ ತುಂಬಲು ನೀರಾವರಿ ಪಂಪ್ ಸೆಟ್ಟು ಮತ್ತು ವಿದ್ಯುತ್ ಚಿತಾಗಾರಗಳನ್ನು ಉಳಿದು, ಉಳಿದೆಲ್ಲಾ ಗ್ರಾಹಕರ ಮೇಲೆ ಶೇಕಡ ೧೦ ರಿಂದ ೮೦ರ ವರೆಗೆ ಕಡಿತವನ್ನು ವಿಧಿಸಲಾಗಿದೆ.

ನೀರಾವರಿ ಪಂಪ್‌ಸೆಟ್ಟಿನ ಗ್ರಾಹಕರ ಬಳಕೆಯ ಮೇಲೆ ನಿರ್ಬಂಧವಿಲ್ಲ. ವಿದ್ಯುತ್ ಸಂರಕ್ಷಣೆಗೆ ಈ ವರ್ಗದ ಗ್ರಾಹಕರಿಂದಲೂ ಸಹಕಾರ ಅಗತ್ಯವಿದ್ದ ಪಂಪ್‌ಸೆಟ್ಟುಗಳ ಲೋಡ್ ಅಧಿಕವಾಗಿರುವ ಗ್ರಾಮೀಣ ಫೀಡರ್‌ಗಳಲ್ಲಿ ಹಗಲಿನಲ್ಲಿ ೮ ಗಂಟೆಗಳ ಕಾಲ ವಿದ್ಯುತ್ ಸರಬರಾಜಿಗೆ ತರಲಾಯಿತು

ಆದರೆ ರೈತಪರ್ಗದವರ ಮನವಿಯ ಮೇಲೆ ಈ ವಿದ್ಯುತ್ ನಿಲುಗಡೆಯನ್ನು ಒಂದು ದಿನ ಬೆಳಗಿನ ೬ರಿಂದ ಮಧ್ಯಾಹ್ನ ೨ ಘಂಟೆವರೆಗೂ ಮಾರನೇ ದಿನ ಬೆಳಿಗ್ಗೆ ೯ರಿಂದ ಸಾಯಂಕಾಲ ೫ ಘಂಟೆಯವರೆಗೂ ವಿದ್ಯುತ್ ನಿಲುಗಡೆ ಮಾಡುವುದನ್ನು ಜಾರಿಗೆ ತರಲಾಯಿತು. ಆದರೆ ಈ ನಿಲುಗಡೆ ವೇಳೆಯನ್ನು ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಡಿಸಲು ಅವಕಾಶ ಮಾಡಿದ್ದು ಅವಧಿ ೮ ಗಂಟೆಗಳದ್ದಾಗಿರಲೇ ಬೇಕಾಗುತ್ತದೆ. ಆದ್ದರಿಂದ ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ನಿಲುಗಡೆಯನ್ನು ದಿನವಹಿ ಹಗಲು ೮ ಘಂಟೆಗಳ ಕಾಲ, ಬೆಳಿಗ್ಗೆ ೮ರಿಂದ ಮಧ್ಯಾಹ್ನ ೪ ಘಂಟೆ ವರೆಗೆ ಮಾಡಲಾಗುತ್ತಿದೆ.

ಪಟ್ಟಣ ಪ್ರದೇಶಗಳಲ್ಲಿನ ಹೆಚ್ಚು ಕಡಿಮೆ ಎಲ್ಲಾ ಗ್ರಾಹಕರ ಬಳಕೆಯ ಮೇಲೆ ಕಡಿತ ವಿಧಿಸಿದ್ದರೂ, ಇಲ್ಲೂ ದಿನಕ್ಕೆ ೨ ಘಂಟೆಗಳ ಕಾಲ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ. ಮೇಲ್ಕಂಡ ವಿದ್ಯುತ್ ನಿಲುಗಡೆ ಅನಿವಾರ್ಯವಾಗಿರುವುದರಿಂದ ಎಲ್ಲಾ ವರ್ಗದವರ ಸಹಕಾರ ಈ ಕಷ್ಟಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾಗಿದೆ.

೨) ಸವದತ್ತಿ ತಾಲ್ಲೂಕು ಮುರುಗೋಡ ಗ್ರಾಮದಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಿಸಲು ಒತ್ತಾಯ.

ಶ್ರೀ ಶಿವಾನಂದ ಹೆಜ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕು ಪೈಕಿ "ಮುರಗೋಡ" ಗ್ರಾಮದಲ್ಲಿ ಬಸ್ ಸ್ಟ್ಯಾಂಡ್. ಬಿಲ್ಡಿಂಗ್‌ದ ಅವಶ್ಯಕತೆ ಬಹಳೇ ಇದ್ದು. ಕೂಡಲೆ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳಲು ಡಿವಿಜನಲ್ ಕಂಟ್ರೋಲರ್ ಕೆಎಸ್‌ಆರ್‌ಟಿಸಿ ಬೆಳಗಾಂ ಇವರಿಗೆ ಆದೇಶ ನೀಡಬೇಕು. ಮತ್ತು ಕೂಡಲೇ ಅಲ್ಲಿ ಬಸ್ ಸ್ಟ್ಯಾಂಡ್ ಬಿಲ್ಡಿಂಗ್ ಕಟ್ಟಲು ಮ್ಯಾನೇಜಿಂಗ್ ಡೈರೆಕ್ಟರ್. ಕೆಎಸ್‌ಆರ್‌ಟಿಸಿ ಬೆಂಗಳೂರು ಇವರಿಗೆ ಆದೇಶ ನೀಡಬೇಕೆಂದು ಮಾನ್ಯ ಸಾರಿಗೆ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕಿನ ಮುರಗೋಡು ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟಲು ಈಗ ನಿಗದಿ ವಶದಲ್ಲಿ ಇರುವ ೯ ಗುಂಟೆ ಜಾಗವು ಸಾಕಾಗದೆ ಇರುವುದರಿಂದ ಬೇರೆ ಸುಮಾರು ೬೦ ಗುಂಟೆ ಜಾಗವನ್ನು ಈಗಾಗಲೇ ಗುರುತಿಸಲಾಗಿದೆ. ಅಸಿಸ್ಟೆಂಟ್ ಕಮಿಷನರ್, ಬೈಲಹೊಂಗಲ ಅವರು ೬೦ ಗುಂಟೆ ಜಾಗದ ಬೆಲೆಯನ್ನು ೪೪,೦೦೦ ರೂಪಾಯಿಗಳ ಕಿಮ್ಮತ್ತು ಮಾಡಿರುತ್ತಾರೆ. ಸದರಿ ಸ್ಥಳವು ಹಳ್ಳ ತಗ್ಗುಗಳಿಂದ ಕೂಡಿರುವುದರಿಂದ ಬಸ್ ನಿಲ್ದಾಣವನ್ನು ಕಟ್ಟಲು ಹೆಚ್ಚು ವೆಚ್ಚ ತಗಲುವುದರಿಂದ ಪುನಃ ಸ್ಥಳವನ್ನು ಪರಿಶೀಲಿಸಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು. ಜಮೀನು ನಮ್ಮ ವಶಕ್ಕೆ ಬಂದ ನಂತರ ಬಸ್ ನಿಲ್ದಾಣವನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು

ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಬಗ್ಗೆ ನನ್ನ ಜೊತೆ ಬಂದು ಮಾತನಾಡಿದ್ದಾರೆ. ಅಲ್ಲಿ ಆದಷ್ಟು ಬೇಗ ಒಂದು ಬಸ್ ನಿಲ್ದಾಣಕ್ಕೆ ಮಂಜೂರಾತಿ ಕೊಡುವುದಕೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ನಾನು ಸೂಚನೆಯನ್ನು ಕೊಡುತ್ತೇನೆ.

೩ ರಾಜ್ಯದಲ್ಲಿ ಗಾಣೋದ್ಯಮ ಮಂಡಳಿಯನ್ನು ಸ್ಥಾಪಿಸುವುದು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಸುಮಾರು ೧೦ ಲಕ್ಷ ಗಾಣಿಗರಿದ್ದಾರೆ ಅವರ ಮೂಲ ಉದ್ಯೋಗವಾದ ತೈಲ ವೃತ್ತಿಯು ಅವರ ಕೈಯಿಂದ ತಪ್ಪಿಹೋಗಿ ಶೋಚನೀಯ ಸ್ಥಿತಿಯಲ್ಲಿರುತ್ತಾರೆ. ಗಾಣಿಗರಿಗೆ ಕಚ್ಚಾ ಸಾಮಗ್ರಿಗಳಾದ ಎಣ್ಣೆಕಾಳು, ಕೊಬರಿ ಇತ್ಯಾದಿಗಳು ಸುಲಭವಾಗಿ ದೊರಕುವಂತಾಗಬೇಕು. ಅವರ ಅಭಿವೃದ್ಧಿಯ ನೆಲೆಯಲ್ಲಿ ಗಾಣಿಗರೇ ಕೇಳಿಕೊಂಡಂತೆ ಸರಕಾರ ಗಾಣೋದ್ಯಮ ಅಭಿವೃದ್ಧಿ ಮಂಡಳಿಯನ್ನು ರಚಿಸಿ ಹಿಂದೆ ಇದ್ದಂತೆ ಹಳ್ಳಿ ಹಳ್ಳಿಗಳಲ್ಲಿ ಈ ಗಂಡಿ ಕೈಗಾರಿಕೆಗೆ ಹೊಸ ಶಕ್ತಿಯನ್ನು ನೀಡಿ ಹಿಂದುಳಿದಿರುವ ಗಾಣಿಗರ ಸಮುದಾಯಕ್ಕೆ ಸಹಕಾರ ನೀಡುವುದು ಉಪಯುಕ್ತವಾಗಿರುತ್ತದೆ. ಈ ಕುರಿತು ಸಣ್ಣ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.